


ತಿಂಗಳು ಎಕ್ಸ್‌ಪೀರಿಯೆನ್ಸ್ ಇರೋ ಇನ್ನಿಬ್ಬರು ಸೀನಿಯರ್‌ಗಳು ಬರ್ತಾರೆ. ಅವರಲ್ಲಿ ಒಬ್ಬರನ್ನು ನಿಮ್ಮ ಶಿಫ್ಟ್‌ಗೆ ಕೊಡ್ತೀನಿ ಅಂತ ನ್ಯೂಸ್‌ಎಡಿಟರ್ ಸಮಾಧಾನ ಮಾಡಿ ಕಳಿಸಿದರು.

ಹೊಸ ಹುಡುಗರು ಬುದ್ಧಿವಂತರಾಗಿದ್ದರೆ ಅವರನ್ನು ನಿಭಾಯಿಸೋದು ಕಷ್ಟ. ಅವರಿಗಿಂತ ಮೇಲಿರುವ ಸೀನಿಯರ್‌ಗಳು ಸದಾ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್‌ನಲ್ಲಿ ನರಳ್ತಾ ಇರ್ತಾರೆ. ಹೊಸ ಹುಡುಗರ ಸ್ಪೀಡಿಗೆ ಓಡೋಕೆ ಆಗದೆ ಒದ್ದಾಡಿ ಹೋಗ್ತಾರೆ. ಅದು ಅಪಾಯ. ಕೊನೆಗೆ ಗುಂಪುಗಾರಿಕೆ ಶುರುವಾಗುತ್ತೆ ಅದಕ್ಕೆ ಅವಕಾಶ ಕೊಡಬಾರದು ಅಂತ ನ್ಯೂಸ್ ಎಡಿಟರ್‌ಗೆ ಅನ್ನಿಸಿತು.

★★★

ಮಧ್ಯಾಹ್ನ ಪ್ರಿಂಟಿಂಗ್ ಸೆಕ್ಷನ್‌ನ ಮೆಂಟೆನೆನ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಮುನಾವರ್ ಎಂಬ ಮೆಕ್ಯಾನಿಕ್‌ನ ಕೈ ಮಿಷಿನ್‌ಗೆ ಸಿಕ್ಕಿ ಜಜ್ಜಿ ಹೋಯಿತು ಅಂತ ಸುದ್ದಿ ಗೊತ್ತಾಗುತ್ತಿದ್ದಂತೆ ತೇಜಸ್ವಿ ನೋಡಿ ಬರಲು ಅಲ್ಲಿಗೆ ಓಡಿದ.

ಮುನಾವರ್ ಕೈ ಮೊಳಕೈ ತನಕ ಅಪ್ಪಚ್ಚಿಯಾಗಿ ನೇತಾಡುತ್ತಿತ್ತು. ಸಾಕಷ್ಟು ಬ್ಲೀಡಿಂಗ್